## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 36 ಗ್ರಾನೀಸ (5) 2013 (P)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 30.12.2013.

## ಸುತ್ತೋಲೆ

ವಿಷಯ: MVS ಯೋಜನೆಗಳ ಅನುಷ್ಠಾನ ಸಲುವಾಗಿ ಕೈಗೊಳ್ಳಬೇಕಾದ ಭೂಸ್ವಾಧೀನ ಪ್ರಕಿಯೆ ಕುರಿತು.

ಉಲ್ಲೇಖ: ದಿನಾಂಕ:07.12.2013ರ ಸಭಾ ನಡವಳಿಗಳು.

---

ದಿನಾಂಕ:07.12.2013ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಹುಗ್ರಾಮ ಯೋಜನೆಗಳ ಮುಖ್ಯ ಕಾಮಗಾರಿಗಳ ನಿರ್ಮಾಣ ಬಾಬ್ತಿಗಾಗಿ ಸರ್ಕಾರಿ ಭೂಮಿಯಿರುವಡೆ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಾಗ್ರತೆಯಾಗಿ ಅಗತ್ಯವಿರುವ ಜಮೀನು ಪಡೆದುಕೊಳ್ಳಲು ವೈಯಕ್ತಿಕ ಗಮನಹರಿಸಬೇಕು. ಇದಲ್ಲದೆ, ಖಾಸಗಿ ಜಮೀನನ್ನು ಪಡೆಯಬೇಕಾದ ಅನಿವಾರ್ಯತೆಯಿದ್ದಲ್ಲಿ ವಿಳಂಬವಾಗುವ ಭೂಸ್ವಾಧೀನ ಪ್ರಕ್ರಿಯೆ ಬದಲಾಗಿ ಸಂಬಂಧಿಸಿದ ಭೂಮಾಲೀಕರೊಡನೆ ನಿಯಮಾನುಸಾರ ನೇರವಾಗಿ ಸಂಧಾನ ನಡೆಸಿ, ಯೋಜನೆಗೆ ಅಗತ್ಯವಿರುವ ಕನಿಷ್ಠ ಭೂಮಿಯನ್ನು / ನಿವೇಶನವನ್ನು ಪಡೆದುಕೊಳ್ಳಲು, SC/ST ಕಾರ್ಪೋರೇಷನ್‌ರವರು, ಹೌಸಿಂಗ್ ಬೋರ್ಡ್ ಈ ಸಂಬಂಧ ಅನುಸರಿಸುವ ಪದ್ಧತಿಯಂತೆಯೇ, ಜಿಲ್ಲಾಧಿಕಾರಿಗಳೇ CEO/ZP ಪ್ರಸ್ತಾವನೆ ಆಧರಿಸಿ (ಕಂದಾಯ ಇಲಾಖೆ ನಿಗದಿಪಡಿಸಿರುವ ಗರಿಷ್ಠ ಭೂಸ್ವಾಧೀನ ಮೊತ್ತದ ಮಿತಿಯೊಳಗೆ) ಭೂಸಾಧೀನ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ನೀಡಿದೆ. ಇನ್ನು ಮುಂದೆ ತಹಶೀಲ್ದಾರ್‌ರವರ ಬಳಿ ಭೂಸ್ವಾಧೀನ ಸಂಬಂಧ ವ್ಯವಹರಿಸುವ ಜೊತೆಗೆ ಸಹಾಯಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳವರ ಜೊತೆಗೂ ಸಹ ಜಿಲ್ಲಾ ಪಂಚಾಯತ್ ಸಮನ್ವಯ ಹೊಂದಿ ಜಾಗ್ರತೆಯಾಗಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯ ಬಗ್ಗೆ ಕಾಳಜಿ ವಹಿಸತಕ್ಕದೆಂದು ತಿಳಿಸಿದೆ.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
Ph:2232806 Fax2223175/22340655
Email:rk3452000@yahoo.co.in

ಇವರಿಗೆ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–09
3. ರಾಜ್ಯದ ಎಲ್ಲಾ (8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.
4. ರಾಜ್ಯದ ಎಲ್ಲಾ (38) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.

ಪ್ರತಿ:

ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.